## ವಿಶೇಷ, 2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿತ್ರದುರ್ಗ

## ಸ್ಪೆಷಲ್ ಕೇಸ್ (ಎಸ್.ಸಿ./ಎಸ್.ಟಿ.) ನಂ. 08/2021

ಪ್ರ.ವ.ಬೋ. ದಿನಾಂಕ -26.07.2023

| | | | | | |
|---|---|---|---|---|---|
| ಸಾಕ್ಷಿದಾರರ ಹೆಸರು | - | ಪ್ರವೀಣ | ಪ್ರಾ.ಸಾ. | - | 06 |
| ತಂದೆಯ ಹೆಸರು | - | ಹನುಮಂತಪ್ಪ | ಚಾ.ಸಾ. | - | 06 |
| ವಯಸ್ಸು | - | 32 ವರ್ಷ | | | |
| ಉದ್ಯೋಗ | - | ಕಂಪ್ಯುಟರ್ ಅಪರೇಟರ್ | | | |
| ವಾಸ ಸ್ಥಳ | - | ಪಂಪಾ ಪುರ | | | |

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**- ಮುಖ್ಯ ವಿಚಾರಣೆ - ವಿಶೇಷ ಸರ್ಕಾರಿ ಅಭಿಯೋಜಕರಿಂದ -**

1. ಸಾಕ್ಷಿಗೆ ನಿಪಿ-9 ತೋರಿಸಿದ್ದು ಅವರು ಅದರಲ್ಲಿರುವ ತಮ್ಮ ಸಹಿಯನ್ನು ಗುರುತಿಸಿರುವುದರಿಂದ ಅದನ್ನು ನ ನಿಪಿ- 9(ಸಿ ) ಎಂದು ಗುರುತಿಸಲಾಗಿದೆ. 13.08.2020 ರಂದು ಡಿ.ವೈ.ಎಸ್.ಪಿ. ಕಚೇರಿಯಲ್ಲಿ ಪೋಲೀಸರು ಗಲಾಟೆ ವಿಚಾರದಲ್ಲಿ ಶ್ರೀನಿವಾಸ ಒಂದು ಪೆನ್ ಡ್ರೈವ್ ನ್ನು ಡಿ.ವೈ.ಎಸ್.ಪಿ. ರವರಿಗೆ ನೀಡಿದರು ಅದನ್ನು ಲಾಪ್ ಟಾಪ್ ಗೆ ಹಾಕಿ ಅದರಲ್ಲಿ ಇದ್ದ ದೃಶ್ಯಾವಳಿಗಳನ್ನು ತೋರಿಸಿದರು . ಅದರಲ್ಲಿ 4 ವಿಡಿಯೋ ಮತ್ತು 17 ಪೋಟೋಗಳು ಇದ್ದವು . ಸದರಿ ಪೆನ್ ಡ್ರೈವ್ ನ್ನು ಪೋಲೀಸರು ತೆಗೆದುಕೊಂಡು ಪೋಟೋ ತೆಗೆದುಕೊಂಡರು . ಸದರಿ ಪೆನ್ ಡ್ರೈವ್ ನ್ನು ನೋಡಿದರೆ ಗುರುತಿಸುತ್ತೇನೆ . ಸಾಕ್ಷಿ ಮು.ಮಾ.- 13 ನ್ನು ನೋಡಿ ಸದರಿ ಪೆನ್ ಡ್ರೈವ್ ಎಂದು ಗುರುತಿಸಿರುತ್ತಾರೆ .ಸಾ ಕ್ಷಿ ನಿಪಿ -10 ,11 ನ್ನು ನೋಡಿ ಆ ಸಂದರ್ಭದಲ್ಲಿ ತೆಗೆದ ಪೋಟೋ ಎಂದು ಗುರುತಿಸಿರುತ್ತಾರೆ .

**- ಪಾಟೀ ಸವಾಲು - ಆರೋಪಿಗಳ ಪರವಾಗಿ - ಶ್ರೀ ಬಿ.ಎ.ಕೆ ವಕೀಲರಿಂದ -**

ಚಾಸಾ 01 ನನ್ನ ಅಕ್ಕ . ಚಾಸಾ 10 ನನ್ನ ಮಾವ . ಚಾಸಾ 10 ಡಿ.ವೈ.ಎಸ್.ಪಿ. ಕಚೇರಿಗೆ ಕರೆದುಕೊಂಡು ಬಂದರು . ಗಲಾಟೆ ನಡೆಯಿತು ಎನ್ನಲಾದಾಗ ನಾನು ಪಂಪಾಪುರದಲ್ಲಿ ವಾಸವಾಗಿದ್ದೆ . ಪೋಲೀಸರು ಪಂಚನಾಮೆಗೆ ಹಾಜರಾಗುವಂತೆ ನನಗೆ ನೋಟೀಸ್ ನೀಡಿರಲಿಲ್ಲ . ನಾನು ಬಿ.ಎ. ಓದಿದ್ದೇನೆ . ಮೊಬೈಲ್ ನಿಂದ ಪೆನ್ ಡ್ರೈವ್ ಗೆ ಶ್ರೀನಿವಾಸ್ ತಮ್ಮ ಮೊಬೈಲ್ ನಿಂದ ಡೌನ್ ಲೋಡ್ ಮಾಡಿದರು . ನಾನು ಶ್ರೀನಿವಾಸ್ ಜೊತೆಗೆ ಡಿ.ವೈ.ಎಸ್.ಪಿ. ಕಚೇರಿಗೆ ಬಂದಿದ್ದೆ . ಪೆನ್ ಡ್ರೈವ್ ಗೆ ಎಲ್ಲಿ ಡೌನ್ ಲೋಡ್ ಮಾಡಿಸಿದ್ದರು ಎಂದು ನನಗೆ ಗೊತ್ತಿಲ್ಲ . ಪೆನ್ ಡ್ರೈವ್ ನ ಹೆಸರು ನನಗೆ ಗೊತ್ತಿಲ್ಲ . ಲ್ಯಾಪ್ ಟಾಪ್ ನಲ್ಲಿ ಸುಮಾರು 10 ನಿಮಿಷ ವೀಕ್ಷಿಸಿದ್ದೇವು . ಲಾಪ್ ಟಾಪ್ ನಲ್ಲಿ ತೋರಿಸಿದಾಗ ನಾನು ಕಚೇರಿಯ ಒಳಗಡೆ ಇದ್ದೆ . ನಾನು ಅದನ್ನು ವೀಕ್ಷಿಸಿದೆ . ನಾನು ಅದನ್ನು ವೀಕ್ಷಿಸಿದಾಗ ಕುರಿ ಹೊಲದಲ್ಲಿ ಇದ್ದವು , ನಾಗಮ್ಮ ನೆಲದಲ್ಲಿ ಬಿದ್ದು ಒದ್ದಾಡುತ್ತಿದ್ದರು . ಅಡಿಕೆ ಗಿಡವನ್ನು ಕೀಳುತ್ತಿದ್ದರು . ಯಾರು ಕೀಳುತ್ತಿದ್ದರು ಎಂದು ನಿರ್ದಿಷ್ಟವಾಗಿ ಗೊತ್ತಿಲ್ಲ . ಅವುಗಳು ಸುಮಾರು 2 ವರೆ ವರ್ಷದ ಅಡಿಕೆ ಗಿಡಗಳು ಆಗಿದ್ದವು . ಸುಮಾರು 11 ರಿಂದ 11.45 ಗಂಟೆ ಸುಮಾರಿಗೆ ಸಹಿ ಮಾಡಿದೆ . ನಿಪಿ –9 ರಲ್ಲಿ ಏನು ಚಕ್ಕುಬಂದಿ ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ . ನಿಪಿ –9 ರಲ್ಲಿ ಏನೇನು ಬರವಣಿಗೆ ಮಾಡಿದ್ದಾರೆ ಎಂದು ನನಗೆ ಹೇಳಲು ಅಗುವುದಿಲ್ಲ ಎಂದರೆ ಸರಿ . ನಾನು ನಮ್ಮ ಊರಿನಲ್ಲಿ ಇದ್ದಾಗ ಪೋಲೀಸರು ನಮ್ಮನ್ನು ಬಂದು ಕರೆದರು ., ನಾನು ಶ್ರೀನಿವಾಸ್ ಜೊತೆಗೆ ಬಂದೆ . ನನ್ನ ಸಮಕ್ಷಮ ಪೆನ್ ಡ್ರೈವ್ ವಶಪಡಿಸಿಕೊಂಡರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಫೋಟೋ ತೆಗೆದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ 1, 10 ನನ್ನ ಸಂಬಂಧಿಕರಾದ್ದರಿಂದ ನನಗೆ ಯಾವುದೇ ವಿಚಾರ ತಿಳಿಯದೇ ಇದ್ದರು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸುಮಾರು 10 ನಿಮಿಷ ಲ್ಯಾಪ್ ಟಾಪ್ ನಲ್ಲಿ ದೃಶ್ಯಾವಳಿಗಳನ್ನು ವೀಕ್ಷಿಸಿದ್ದೇವು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಲ್ಯಾಪ್ ಟಾಪ್

ಯಾವ ಕಂಪನಿಯದ್ದು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ . ಡಿ.ವೈ.ಎಸ್.ಪಿ. ಕಚೇರಿಗೆ ಹೋಗಿದ್ದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

ವಿಶೇಷ, 2 ನೇ ಅಪರ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಚಿತ್ರದುರ್ಗ.

## ವಿಶೇಷ, 2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿತ್ರದುರ್ಗ

### ಸ್ಪೆಷಲ್ ಕೇಸ್ (ಎಸ್.ಸಿ./ಎಸ್.ಟಿ.) ನಂ. 08/2021

ಪ್ರ.ವ.ಬೋ. ದಿನಾಂಕ -26.07.2023

| | | | | | |
|---|---|---|---|---|---|
| ಸಾಕ್ಷಿದಾರರ ಹೆಸರು | - | ಪರಮೇಶ್ವರಪ್ಪ | ಫ್ರಾ.ಸಾ. | - | 07 |
| ತಂದೆಯ ಹೆಸರು | - | ಕರಿಯಾ ಬೋವಿ | ಚಾ.ಸಾ. | - | 07 |
| ವಯಸ್ಸು | - | 38 ವರ್ಷ | | | |
| ಉದ್ಯೋಗ | - | ವ್ಯವಸಾಯ | | | |
| ವಾಸ ಸ್ಥಳ | - | ಕಣಿವೆ ಜೋಗಿ ಹಳ್ಳಿ | | | |

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**- ಮುಖ್ಯ ವಿಚಾರಣೆ - ವಿಶೇಷ ಸರ್ಕಾರಿ ಅಭಿಯೋಜಕರಿಂದ -**

1. ಚಾಸಾ 1 ನನ್ನ ಅತ್ತಿಗೆ . ನ್ಯಾಯಾಲಯದ ಮುಂದಿರುವ ಆರೋಪಿಗಳು ಗೊತ್ತು .

2. 01.08.2020 ರಂದು ಬೆಳಗ್ಗೆ ಸುಮಾರು 11 ಗಂಟೆಗೆ ನಮ್ಮಜಮೀನಿನಲ್ಲಿ ಗಲಾಟೆಯಾಯಿತು . ನಮ್ಮ ಜಮೀನಲ್ಲಿ ದನ , ಕುರಿ ಓಡಾಡಲು ರಸ್ತೆ ಬೇಕು ಎಂದು ನಮ್ಮ ತಂದೆ ತಾಯಿಯನ್ನು ಗ್ರಾಮಸ್ಥರು ಕೇಳಿದ್ದು ನಾವು ರಸ್ತೆ ಬಿಟ್ಟುಕೊಡಲು ಒಪ್ಪಿದ್ದರೂ ಕುಮ್ಮಕ್ಕಿನಿಂದ ದಿಃ 01.08.2020 ರಂದು ಬೆಳಗ್ಗೆ 11 ಗಂಟೆಗೆ ಕೆಂಚಪ್ಪ , ಚಿತ್ತಪ್ಪ , ಚಿತ್ತಪ್ಪ , ಪ್ರಶಾಂತ , ಪಾತಪ್ಪ , ವೆಂಕಟೇಶ ಹಾಗೂ ಇತರರು ಗುಂಪು ಕಟ್ಟಿಕೊಂಡು ಬಂದು ಅಡಿಕೆ ಗಿಡಗಳನ್ನು ಕಿತ್ತು ಹಾಕಿ , ಕುರಿಗಳನ್ನು ಬಿಟ್ಟುಮೆಕ್ಕೆ ಜೋಳ ಮೇಯಿಸಿದರು . ಅಡಿಕೆ ಗಿಡಗಳನ್ನು ಹಾಗೂ ನಾವು ವಾಸ ಮಾಡುವ ಮನೆಯನ್ನು ಬೆಂಕಿ ಹಾಕಿ ಸುಟ್ಟುಹಾಕಿದರು . ನನಗೆ ಹೊಡೆಯಲು ಬಂದಿದ್ದು , ನಾನು ತಪ್ಪಿಸಿಕೊಂಡೆ . ಚಾಸಾ 01 ರವರಿಗೆ ಪ್ರಶಂತ್ ಮತ್ತು ಕೆಂಚಪ್ಪ ಹೊಡೆದರು . ಚಾಸಾ 10 ರ ವರಿಗೆ ಚಿತ್ತಪ್ಪ ಕೋಲಿನಿಂದ ತಲೆಗೆ ಹೊಡೆದರು . ನಮ್ಮ ತಂದೆಗೆ ಪಾತಪ್ಪ ಕೈ ಕಾಲುಗಳಿಂದ ಹೊಡೆರದು . ಚಾಸಾ -01 ಮೂರ್ಛೆ ಹೋದರು . ಚಾಸಾ 01 ರವರ ಮಕ್ಕಳು ಮತ್ತು ನಾವು ಚಾಸಾ

1 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋದೇವು . ಬಸವರಾಜ ಚಾಸಾ –10 ರವರನ್ನು ಅಂಬ್ಯುಲೆನ್ಸ್ ನಲ್ಲಿ ಜಿಲ್ಲಾ ಆಸ್ಪತ್ರೆಗೇ ಕರೆದುಕೊಂಡು ಬಂದರು . ನಾವು ಆಸ್ಪತ್ರೆಯಲ್ಲಿ ಇದ್ದಾಗ ಮಧ್ಯಾಹ್ನ 3 ಗಂಟೆಯಲ್ಲಿ ಮನೆಯ ಹತ್ತಿರ ಬಂದು ಗಲಾಟೆ ಮಾಡಿದರು ಎಂದು ಪವಿತ್ರ ಮತ್ತು ಪಾರ್ವತಮ್ಮ ನನಗೆ ಫೋನ್ ಮಾಡಿ ತಿಳಿಸಿದರು . ವಡ್ಡ ಸೂಳೇ ಮಕ್ಕಳಾ ನಿಮ್ಮನ್ನು ಸಾಯಿಸುತ್ತೇವೆ , ಊರು ಬಿಡುಸುತ್ತೇವೆ ಎಂದು ಜಾತಿ ನಿಂದನೆ ಮಾಡಿದರು . ಈ ಬಗ್ಗೆ ನಾನು ಪೋಲೀಸರಿಗೆ ಹೇಳಿಕೆ ನೀಡಿದ್ದೇನೆ .

3. ಸಾಕ್ಷಿಗೆ 01.08.2020 ರ ಪಂಚನಾಮೆ ತೋರಿಸಿದ್ದು ಅವರು ಅದರಲ್ಲಿರುವ ತಮ್ಮ ಸಹಿಯನ್ನು ಗುರುತಿಸಿರುವುದರಿಂದ ಪಂಚನಾಮೆ ನಿಪಿ–12 ಎಂದು ಸಾಕ್ಷಿಯ ಸಹಿಯನ್ನು ನಿಪಿ–12(ಎ) ಎಂದು ಗುರುತಿಸಲಾಗಿದೆ . ದೂರು ನೀಡಿದ ನಂತರ ಪೋಲೀಸರು ಸ್ಥಳಕ್ಕೆ ಬಂದು ತನಿಖೆ ಮಾಡಿ ಬರವಣಿಗೆ ಮಾಡಿಕೊಂಡರು , ಆಗ ನಾನು ನಿಪಿ –12 ಕ್ಕೆ ಸಹಿ ಮಾಡಿದ್ದೇನೆ . ಗಲಾಟೆ ಮಾಡಿದ ಆರೋಪಿಗಳು ಗೊಲ್ಲ ಜನಾಂಗದವರು .

**– ಪಾಟೀ ಸವಾಲು – ಆರೋಪಿಗಳ ಪರವಾಗಿ – ಶ್ರೀ ಬಿ.ಎ.ಕೆ ವಕೀಲರಿಂದ –**

4. ಸುಮಾರು 11 ರಿಂದ 12 ಗಂಟೆ ವರೆಗೆ ಗಲಾಟೆಯಾಯಿತು . ಪ್ರಶಾಂತ್ ಮತ್ತು ಕೆಂಚಪ್ಪ ಚಾಸಾ 1 ರವರಿಗೆ ದೊಣ್ಣೆಯಿಂದ ತಲೆಗೆ ಮತ್ತು ಬೆನ್ನಿಗೆ ಹೊಡೆದರು . ನಾನು ಸುಮಾರು 20–30 ಮೀಟರ್ ದೂರದಲ್ಲಿ ಇದ್ದೆ . ಸುಮಾರು 100–150 ಜನ ಇದ್ದರು . ನನ್ನದ್ದು ಕಣಿವೆ ಜೋಗಿ ಹಳ್ಳಿ , ಆರೋಪಿಗಳು ಅದೇ ಊರಿನವರು . 150 ಜನರ ಪೈಕಿ 25–30 ಜನರ ಹೆಸರನ್ನು ಹೇಳಬಲ್ಲೆ . ಗೊಲ್ಲ ಜನಾಂಗದವರು ಕುಮ್ಮಕ್ಕು ನೀಡಿದರು . ಕುಮ್ಮಕ್ಕು ನೀಡಿದವರೆಲ್ಲರ ಹೆಸರನ್ನು ನನ್ನ ಹೇಳಿಕೆಯಲ್ಲಿ ಹೇಳಿದ್ದೇನೆ . ನಾನೇ ಚಾಸಾ 01 ಮತ್ತು ಮಕ್ಕಳನ್ನು ಆಸ್ಪತ್ರೆಗೆ ಕರೆದುಕೊಂಡು ಹೋದೆ . ಚಾಸಾ10 , 11 ರವರನ್ನು ಬಸವರಾಜ ಅಂಬ್ಯೂಲೆನ್ಸ್ ನಲ್ಲಿ ಕರೆದುಕೊಂಡು ಬಂದರು. ಆಗ

ನಾನು ಆಸ್ಪತ್ರೆಯಲ್ಲಿಯೆ ಇದ್ದೆ . ಚಾಸಾ 01 ಹೇಳಿಕೆ ನೀಡುವ ಸ್ಥಿತಿಯಲ್ಲಿ ಇದ್ದರು . ಯಾರು ಯಾರು ಹಲ್ಲೆ ಮಾಡಿದರು ಎಂದು ವೈದ್ಯರಿಗೆ ಚಾಸಾ 1 ಮತ್ತು ನಾನು ಹೇಳಿದ್ದೇವೆ . ಮಾರನೇ ದಿನ ನಾನು ಊರಿಗೆ ವಾಪಸ್ ಹೋದೆ . ಚಾಸಾ 01 , 1 ದಿನ ಒಳರೋಗಿಯಾಗಿದ್ದರು .

5. ನಾನು ಹೇಳಿದಂತೆ ಗಲಾಟೆ ನಡೆಯಿತು ಎನ್ನಲಾದ ದಿನ ಚಿತ್ತಪ್ಪನಿಗೆ ಹಲ್ಲೆ ಮಾಡಿದ್ದೇವು ಎಂದು ನಮ್ಮ ವಿರುದ್ಧ ಒಂದು ಪ್ರಕರಣ ದಾಖಲಾಗಿದೆ ಎಂದರೆ ಸರಿ . ಸದರಿ ಪ್ರಕರಣ ಚಾಸಾ 10, 11 ಮತ್ತು ನನ್ನ ವಿರುದ್ಧ ದಾಖಲಾಗಿದ್ದು ಈಗಲೂ ಚಾಲ್ತಿಯಲ್ಲಿ ಇದೆ ಎಂದರೆ ಸರಿ . ಅದೇ ದಿನ ಸಂಜೆ 3-4 ಗಂಟೆಗೆ ನನಗೆ ಚಿತ್ತಪ್ಪ ದೂರುನೀಡಿರುವ ವಿಚಾರ ಗೊತ್ತಾಯಿತು ಎಂದರೆ ಸರಿಯಲ್ಲ. ನಮ್ಮ ಊರಿಗೆ ಹೊಳಲ್ಕೆರೆ ಹತ್ತಿರವಾಗುತ್ತದೆ ಮತ್ತು ಚಿತ್ರಹಳ್ಳಿಯಲ್ಲಿಯೂ ಆಸ್ಪತ್ರೆ ಇದೆ ಎಂದರೆ ಸರಿ . ಚಿತ್ರದುರ್ಗಕ್ಕೆ ಬರುವ ದಾರಿಯಲ್ಲಿ ಇರುವ ಜಾನಕೊಂಡದಲ್ಲಿಯೂ ಆಸ್ಪತ್ರೆ ಇದೆ ಎಂದರೆ ಸರಿ . ನಾವು ಜಿಲ್ಲಾ ಆಸ್ಪತ್ರೆಗೆ ಹೋಗಬೇಕೆಂದು ಚಿತ್ರದುರ್ಗಕ್ಕೆ ಬಂದೇವು . ಗುಂಪು ಕಟ್ಟಿಕೊಂಡು ಬಂದು ಎಲ್ಲರೂ ಬೈದರು . ಚಿತ್ತಪ್ಪ ನನಗೆ ಬೈದರು . ನಮ್ಮಜಮೀನು ಮತ್ತು ನಮ್ಮ ಮಾವನ ಜಮೀನು ಅಕ್ಕ ಪಕ್ಕದಲ್ಲಿ ಇವೆ .

6. ಒಂದು ವರ್ಷದ ಅಡಿಕೆ ಗಿಡ ಮತ್ತು 20 ದಿನದ ಮೆಕ್ಕೆಜೋಳದ ಗಿಡಗಳು ಇದ್ದವು . ಅಡಿಕೆ ಗಿಡಗಳಿಗೆ ಬೆಂಕಿ ಇಟ್ಟರು ಎಂದು ಶ್ರೀನಿವಾಸ ವಿಡಿಯೋ ಮಾಡಿದ್ದು ಅದನ್ನು ನೋಡಿದೆ . ಚಿತ್ತಪ್ಪ ನನಗೆ ಹೊಡೆಯಲು ಬಂದರು . ಆ ರೀತಿ ಪೋಲೀಸರಿಗೆ ಹೇಳಿಕೆ ನೀಡಿದ್ದೇನೆ . ನಮ್ಮ ಜಮೀನಿನ ಮುಂದೆ ಎಂದು ಸರ್ಕಾರಿ ಗುಡ್ಡ ಇದೆ ಎಂದರೆ ಸರಿ . ಅಲ್ಲಿ ಮೊದಲಿನಿಂದಲೂ ದಾರಿ ಮಾಡಿಕೊಂಡಿದ್ದಾರೆ ಎಂದರೆ ಸರಿ . ಆರೋಪಿಗಳು ಏಕಾ ಏಕಿ ಕುರಿಗಳನ್ನು ಮೇಯಿಸಿ , ಅಡಿಕೆ ಗಿಡಗಳನ್ನು ಕಡಿದು , ಅಡಿಕೆ ಗಿಡಗಳಿಗೆ, ಮನೆಗೆ ಬೆಂಕಿ ಇಟ್ಟು ನಮಗೆ ಹೊಡೆದು ಜಾತಿ ನಿಂದನೆ ಮಾಡಿದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮನೆಯ ಹತ್ತಿರ ಬಂದು ಗಲಾಟೆ ಮಾಡಿದರು ಎಂದು ಪವಿತ್ರ ಮತ್ತು

ಪಾರ್ವತಮ್ಮ ಹೇಳಿದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ನಾನು ಆಸ್ಪತ್ರೆಯಲ್ಲಿ ಒಂದು ಸಹಿ ಮಾಡಿದ್ದೇನೆ. ಮನೆಯಲ್ಲಿ , ಡಿ.ವೈ.ಎಸ್.ಪಿ. ಕಚೇರಿಯಲ್ಲಿಯೂ ಸಹಿ ಮಾಡಿದ್ದೇನೆ . ನಾನು ಸಹಿ ಮಾಡಿದ ದಾಖಲೆಯಲ್ಲಿ ಏನು ಚಕ್ಕುಬಂದಿ ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ . ನನ್ನ ಸಮಕ್ಷಮ ಮಹಜರ್ ಮಾಡಿ ಫೋಟೋ ತೆಗೆದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗಳು ಹಲ್ಲೆ ಮಾಡಿದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಜನ ಜಾನುವಾರು ಉಪಯೋಗಿಸುವ ದಾರಿಯನ್ನು ಬಂದ್ ಮಾಡಿದ್ದೇವು ಎಂದರೆ ಸರಿಯಲ್ಲ. ಗ್ರಾಮಸ್ಥರಿಗೆ ಹಕ್ಕು ಇದ್ದುರು ನಾವು ದಾರಿ ಬಂದ್ ಮಾಡಿದ್ದರಿಂದ ಅವರು ತಹಶೀಲ್ದಾರ್ ಗೆ ದೂರು ನೀಡದರು ಎಂದರೆ ಸರಿಯಲ್ಲ. ಆರೋಪಿಗಳು ಅತಿಕ್ರಮ ಪ್ರವೇಶ ಮಾಡಿಲ್ಲ ಎಂದರೆ ಸರಿಯಲ್ಲ ಆರೋಪಿಗಳು ನಮ್ಮ ವಿರುದ್ಧ ದೂರು ನೀಡಿದರು ಎನ್ನುವ ದ್ವೇಷದಿಂದ ಈ ಸುಳ್ಳು ದೂರು ನೀಡಿದ್ದೇವೆ ಎಂದರೆ ಸರಿಯಲ್ಲ. ನಾನು ಚಾಸಾ 01 ರವರನ್ನು ಆಟೋದಲ್ಲಿ ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಬಂದೇ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ 10 ರವರನ್ನು ಅಂಬ್ಯೂಲೆನ್ಸ್ ನಲ್ಲಿ ಕರೆದುಕೊಂಡು ಬಂದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

ವಿಶೇಷ, 2 ನೇ ಅಪರ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಚಿತ್ರದುರ್ಗ.